| | | |
|---|---|---|
| | ಮೈಸೂರು ವಿಶ್ವವಿದ್ಯಾನಿಲಯ<br>***ಯುವರಾಜ ಕಾಲೇಜು***<br>(ಉತ್ಕೃಷ್ಟತಾ ಸಾಮರ್ಥ್ಯದ ವಿಶ್ವವಿದ್ಯಾನಿಲಯದ ಸ್ವಾಯತ್ತ ಅಂಗಸಂಸ್ಥೆ)<br>ಮೈಸೂರು | |

# ಗಾಂಧಿ ಜಯಂತಿ ಹಾಗೂ ರಾಷ್ಟ್ರೀಯ ಸೇವಾ ಯೋಜನಾ ದಿನಾಚರಣೆ

ಮೈಸೂರು ವಿಶ್ವವಿದ್ಯಾನಿಲಯದ ಅಂಗಸಂಸ್ಥೆಯಾದ ಯುವರಾಜ ಕಾಲೇಜಿನಲ್ಲಿ ದಿನಾಂಕ: 02-10-2017ರ ಸೋಮವಾರದಂದು ರಾಷ್ಟ್ರೀಯ ಸೇವಾ ಯೋಜನಾ ಹಾಗೂ ಗ್ರೀನ್ ಆಡಿಟ್ ಸಮಿತಿ, ಯುವರಾಜ ಕಾಲೇಜು, ಮೈಸೂರು ವತಿಯಿಂದ ಗಾಂಧಿ ಜಯಂತಿ ಹಾಗೂ ರಾಷ್ಟ್ರೀಯ ಸೇವಾ ಯೋಜನಾ ದಿನಾಚರಣೆ ಅಂಗವಾಗಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನಾ ಘಟಕದ ಸಂಯೋಜಕರಾದ ಡಾ.ಬಿ. ಚಂದ್ರಶೇಖರರವರು ಉದ್ಘಾಟಿಸಿ, ಗಾಂಧೀಜಿಯವರ ವ್ಯಕ್ತಿತ್ವ ಹಾಗೂ ಅವರ ಆದರ್ಶಗಳನ್ನು ತಿಳಿಸಿಕೊಡುವುದರ ಜೊತೆಗೆ ಸ್ವಚ್ಛತೆಯ ಅರಿವು ಮತ್ತು ಜಾಗೃತಿಯ ಬಗೆಗೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಮೈಸೂರು ವಿಶ್ವ ವಿದ್ಯಾನಿಲಯ ವೈದ್ಯಾಧಿಕಾರಿಯವರಾದ ಡಾ.ಎಂ.ಎಸ್. ಬಸವರಾಜುರವರು ಕಾರ್ಯಕ್ರಮದಲ್ಲಿ ನೆರೆದಿದ್ದವರನ್ನು ಉದ್ದೇಶಿಸಿ ಪ್ರಸ್ತುತ ನಮ್ಮ ದೇಶದಲ್ಲಿ 49 ಕೋಟಿ ಜನಸಂಖ್ಯೆ ಟಿ.ಬಿ. ಸೋಂಕಿಗೆ ತುತ್ತಾಗಿದ್ದು, ಈ ಸಮಸ್ಯೆಗೆ ಮೂಲ ಕಾರಣ ಸ್ವಚ್ಛತೆಯ ಕೊರತೆ, ಅರಿವು ಹಾಗೂ ಜಾಗೃತಿ ಇಲ್ಲದಿರುವುದು ಎಂದು ತಿಳಿಸಿದರು.

ಸಮಾರಂಭದಲ್ಲಿ ಯುವರಾಜ ಕಾಲೇಜಿನ ಪ್ರಾಂಶುಪಾಲರಾದ ಡಾ.ಆರ್. ಗಣೇಶ್‌ರವರು ಅಧ್ಯಕ್ಷತೆ ವಹಿಸಿದ್ದರು. ಆಡಳಿತಾಧಿಕಾರಿಯವರಾದ ಡಾ.ಹೆಚ್.ಎನ್. ಕಾಂತಲಕ್ಷ್ಮಿಯವರು, ಪರೀಕ್ಷಾ ನಿಯಂತ್ರಣಾಧಿಕಾರಿಯವರಾದ ಡಾ.ಬಿ.ಎಂ. ವೆಂಕಟೇಶ್‌ರವರು, ರಾಷ್ಟ್ರೀಯ ಸೇವಾ ಯೋಜನಾ ಸಂಯೋಜಕರಾದ ಡಾ.ಪಿ.ಜಿ. ಚಂದ್ರಶೇಖರವರು ಹಾಗೂ ಗ್ರೀನ್ ಆಡಿಟ್ ಸಮಿತಿ ಸಂಚಾಲಕರಾದ ಡಾ.ಎನ್.ಎಸ್. ದೇವಕಿಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಈ ಸ್ವಚ್ಛತಾ ಅಭಿಯಾನದಲ್ಲಿ ಯುವರಾಜ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ಸಲಹಾ ಸಮಿತಿ ಹಾಗೂ ಗ್ರೀನ್ ಆಡಿಟ್ ಸಮಿತಿ ಸದಸ್ಯರು, ಅಧ್ಯಾಪಕರು, ಅಧ್ಯಾಪಕೇತರರು ವಿದ್ಯಾರ್ಥಿಗಳು ಹಾಗೂ ಆಮಂತ್ರಿತರು ಕಾಲೇಜಿನ ಒಳ ಹಾಗೂ ಹೊರ ಆವರಣಗಳಲ್ಲಿ ಗಿಡಗಳನ್ನು ನೆಟ್ಟು, ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಂಡು, ದೇಶದ ಉದ್ದಗಲಕ್ಕೂ ನಡೆಯುತ್ತಿರುವ ಸ್ವಚ್ಛತಾ ಅಭಿಯಾನದಲ್ಲಿ ಭಾಗಿಯಾಗಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

ಪ್ರಾಂಶುಪಾಲರು




**ಗಾಂಧಿ ಜಯಂತಿ ಹಾಗೂ ಎನ್.ಎಸ್.ಎಸ್. ದಿನಾಚರಣೆ ಪ್ರಯುಕ್ತ ಸ್ವಚ್ಛತಾ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ**



**ಸಮಾರಂಭದ ಭಾಗವಾಗಿ ಡಾ.ಎಂ.ಎಸ್.ಬಸವರಾಜುರವರಿಂದ ಗಿಡ ನೆಡುವ ಕಾರ್ಯಕ್ರಮ**



ಕಾಲೇಜಿನ ಒಳಾಂಗಣದಲ್ಲಿ ಕೈಗೊಂಡ ಸ್ವಚ್ಛತಾ ಕಾರ್ಯಕ್ರಮದಲ್ಲಿ ಪ್ರಾಂಶುಪಾಲರನ್ನೂ ಒಳಗೊಂಡಂತೆ ಎಲ್ಲರೂ ಭಾಗವಹಿಸಿರುವುದು



ಯುವರಾಜ ಕಾಲೇಜಿನ ವಿದ್ಯಾರ್ಥಿಗಳಿಂದ ಹೊರಾಂಗಣದ ಸ್ವಚ್ಛತಾ ಕಾರ್ಯಕ್ರಮ